**ಓ ಎಸ್ ನಂಃ 16/2017**

**ಪಿ. ಡಬ್ಲ್ಯೂ ಃ 1**

**ದಿಃ 02.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಕೆ ಎಸ್ ಪಿ ವಕೀಲರಿಂದ ಃ**

2016 ರಲ್ಲಿ ತಹಶೀಲ್ದಾರ್ ಇವರು ನಮ್ಮ ಸ್ವತ್ತನ್ನು ಗ್ರಾಮ ಠಾಣಾ ಎಂದು ಘೋಷಿಸಿದ್ದಕ್ಕೆ ನಾನು ದಾವೆ ಹಾಕಿದ್ದೇನೆ. ನಾನು ಸರ್ಕಾರದ ಪ್ರತಿನಿಧಿಗಳು ಹಾಗೂ ನಮಗೆ ಜಮೀನು ಕೊಟ್ಟ ಗುಂಡೂರಾವ್ ವಿರುದ್ದ ಮಾಡಿದ್ದೇನೆ. ಕ್ರಯಕ್ಕೆ ಕೊಟ್ಟ ಗುಂಡೂರಾವ್ ಈಗ ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರಿಗೆ ಖುದ್ದಾಗಿ ಸಮನ್ಸ ಜಾರಿ ಮಾಡಲು ಪ್ರಯತ್ನಿಸಿದ್ದೇನು. ಅವರು ತೆಗೆದುಕೊಳ್ಳದೆ ಇದ್ದುದ್ದಕ್ಕೆ ಪತ್ರಿಕಾ ಪ್ರಕಟಣೆ ತೆಗೆದುಕೊಂಡಿದ್ದೇನೆ. ಪ್ರತಿವಾದಿ ಗುಂಡೂರಾವ್ ಈಗ ಬದುಕಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸ.ನಂ. 165/1 ರಲ್ಲಿ ವಿಸ್ತೀರ್ಣ 1 ಎಕರೆ 21 ಗುಂಟೆಗಾಗಿ ದಾವೆ ಮಾಡಿದ್ದೇನೆ. ಆ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿದ್ದೇವೆ ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿದ್ದೇನೆ. ಆ ಸ್ವತ್ತಿಗೆ ಸಂಬಂಧಿಸಿದ ಸರ್ವೇ ಸ್ಕೆಚ್ ಕೊಟ್ಟಿದ್ದೇನೆ.

ನಾನು 60 ವರ್ಷಗಳಿಂದ ನಾವು ಮತ್ತು ನಮ್ಮ ಹಿರಿಯರು ಸ್ವಾಧೀನದಲ್ಲಿದ್ದೇವೆ, ಆದ್ದರಿಂದ ಅದರ ಮಾಲೀಕರು ನಾವೇ ಎಂದು ತೋರಿಸಬೇಕೆಂದು ದಾವೆ ಮಾಡಿದ್ದೇನೆ. ದಾವಾ ಸ್ವತ್ತಿನ 1 ಎಕರೆ ಮಾರುಕಟ್ಟೆ ಬೆಲೆ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಹಾಕುವ ಸಮಯದಲ್ಲಿ ದಾವಾ ಸ್ವತ್ತಿನ ಬೆಲೆ ಎಕರೆಗೆ ರೂ. 20 ಲಕ್ಷ ಇತ್ತು. ಮಾರುಕಟ್ಟೆ ಬೆಲೆ ಆಧಾರದ ಮೇಲೆ ನಾನು ನ್ಯಾಯಾಲಯಕ್ಕೆ ಕೋರ್ಟ್ ಫೀ ಕೊಟ್ಟಿಲ್ಲ ಎಂದರೆ ಸರಿ. ಸರಿಯಾದ ನ್ಯಾಯಾಲಯದ ಶುಲ್ಕ ಕೊಡದ ಕಾರಣ ಕೇಸ್ ನ್ನು ಮುಂದುವರೆಸಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ ಗುಂಡೂರಾವ್ ಎಂಬುವವರಿಗೆ ಸೇರಿತ್ತು. ಅದು ಕ್ರಯವಾಗಿದೆ. ಗುಂಡೂರಾವ್ ರವರಿಂದ ನಮ್ಮ ಅಜ್ಜಿ ವೆಂಕಟಮ್ಮ ಅವರ ಗಂಡ ಹನುಮನರಸಯ್ಯ ಕ್ರಯಕ್ಕೆ ತೆಗೆದುಕೊಂಡಿದ್ದಾರೆ.

ಗುಂಡೂರಾವ್ ಇವರಿಗೆ ಸ.ನಂ. 165 ರಲ್ಲಿ 5 ಎಕರೆ 12 ಗುಂಟೆ ಜಮೀನಿತ್ತು, ಅದರಲ್ಲಿ ನಮ್ಮ ಅಜ್ಜಿ ತಾತ 3 ಎಕರೆ 12 ಗುಂಟೆಯನ್ನು ಕ್ರಯಪತ್ರದ ಮೂಲಕ ಪಡೆದಿದ್ದಾರೆ. ಆ ಕ್ರಯಪತ್ರದಲ್ಲಿ

ಪೂರ್ವಕ್ಕೆ ಹನುಮಕ್ಕನ ಜಮೀನು , ಪಶ್ಚಿಮಕ್ಕೆ ಇದೇ ಹೊಲ ಮತ್ತು ರಸ್ತೆ, ಉತ್ತರಕ್ಕೆ ನೀರಗಂಟಿ ಜಮೀನು ಮತ್ತು ದಕ್ಷಿಣಕ್ಕೆ ಕಲ್ಯಾಣಪುರ ಗ್ರಾಮದ ಎಲ್ಲೆ ಇರುತ್ತದೆ. ಬಾಕಿ ಉಳಿದ 2 ಎಕರೆಯನ್ನು ನಮ್ಮ ಸುಪರ್ದಿಗೆ ಬಿಟ್ಟುಹೋಗಿದ್ದಾರೆ. ಸದರಿ ಕ್ರಯಪತ್ರದಲ್ಲಿ ಬಾಕಿ ಉಳಿದ 2 ಎಕರೆಯನ್ನು ನಿಮ್ಮ ಸುಪರ್ದಿಗೆ ಬಿಟ್ಟುಕೊಡುತ್ತೇನೆ ಎಂದು ಹೇಳಿಲ್ಲ. ಒಟ್ಟು ವಿಸ್ತೀರ್ಣವನ್ನು ಹಾಕಿ ಕೊಟ್ಟಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಕ್ರಯಪತ್ರದಲ್ಲಿ ಇರುವ ಚೆಕ್ ಬಂದಿ 3 ಎಕರೆ 12 ಗುಂಟೆಗೆ ಸೀಮಿತವಾಗಿದೆ ಎಂದರೆ ಸರಿಯಲ್ಲ. ಸ.ನಂ.165 ರ 5 ಎಕರೆ 12 ಗುಂಟೆ ಜಮೀನು ಗುಂಡೂರಾವ್ ಇವರಿಗೆ ವಿಭಾಗದಲ್ಲಿ ಬಂದಿತ್ತು ಎಂದರೆ ಸರಿ. ಅವರ ಕುಟುಂಬದ ವಿಭಾಗ ಪತ್ರ ನೋಂದಣಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಪತ್ರವನ್ನು ನಾನು ತೆಗೆಸಿ ನೋಡುವುದು ಮಾಡಿಲ್ಲ.

ದಿನಾಂಕ ಃ 24.03.1954 ರ ವಿಭಾಗದ ಪ್ರಕಾರ 2 ಎಕರೆಯನ್ನು ಸರ್ಕಾರ ಊರಿಗಾಗಿ ಭೂ ಸ್ವಾಧೀನ ಮಾಡಿಕೊಂಡಿದೆ ಎಂದು ಬರೆದಿದೆ ಎಂದರೆ ಸರಿಯಲ್ಲ. ಸದರಿ ವಿಭಾಗಪತ್ರದಲ್ಲಿ ಆ ರೀತಿ ಒಕ್ಕಣೆ ಇದೆ ಎಂದರೆ ಸರಿ. ಆದರೆ ಅದು ಸುಳ್ಳು ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ಅಜ್ಜಿ ತಾತ ಕೇವಲ 3 ಎಕರೆ 12 ಗುಂಟೆಯನ್ನು ಮಾತ್ರ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ ಃ 15.05.1964 ರಲ್ಲಿ ನಮ್ಮ ಅಜ್ಜಿ ಅವರು ಕ್ರಯಕ್ಕೆ ತೆಗೆದುಕೊಂಡಿದ್ದ 3 ಎಕರೆ 12 ಗುಂಟೆ ಪೈಕಿ 1 ಎಕರೆ 26 ಗುಂಟೆಯನ್ನು ದಾಸಪ್ಪ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ವಿವಾದ ಇರುವುದು ಸ.ಂ. 165/1 ಕ್ಕೆ ಸಂಬಂಧಿಸಿದ್ದರಿಂದ ಆ ಕ್ರಯಪತ್ರವನ್ನು ಕೊಟ್ಟಿಲ್ಲ. ಆ ಕ್ರಯಪತ್ರದಲ್ಲಿ ಏನು ಚೆಕ್ ಬಂದಿ ಬೆರದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದರ ಕ್ರಯಪತ್ರವನ್ನು ನಾನು ನೋಡಿಲ್ಲ. ಆ ಕ್ರಯಪತ್ರದಲ್ಲಿ ಉತ್ತರ ದಿಕ್ಕಿಗೆ ನಾವು ಉಳಿಸಿಕೊಂಡ ಸ್ವತ್ತು ಮತ್ತು ಗ್ರಾಮ ಠಾಣಾ ಸ್ವಾಧೀನವಾಗಿರುವ ಜಮೀನು ಎಂದು ಬರೆದಿದೆ ಎಂದರೆ ಸರಿಯಲ್ಲ. ಆ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟರೆ ನಮಗೆ ನ್ಯಾಯ ಸಿಗುವುದಿಲ್ಲ ಎಂಬ ಕಾರಣಕ್ಕೆ ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಕ್ರಯಕ್ಕೆ ಕೊಟ್ಟ ನಂತರ 1 ಎಕರೆ 26 ಗುಂಟೆ ಮಾತ್ರ ನಮ್ಮ ಅಜ್ಜಿಗೆ ಉಳಿದಿತ್ತು ಎಂದರೆ ಸರಿ. ಆದರೆ ಬಾಕಿ ಉಳಿದ 2 ಎಕರೆಯಲ್ಲಿಯೂ ನಾವು ಸ್ವಾಧೀನದಲ್ಲಿದ್ದೇವು ಎಂದು ಸಾಕ್ಷಿ ಹೇಳುತ್ತಾರೆ. 2 ಎಕರೆಯಲ್ಲಿ ಸ್ವಾಧೀನದಲ್ಲಿದ್ದ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೆಂಕಟಮ್ಮ ಇವರಿಗೆ 4 ಜನ ಮಕ್ಕಳು ಅವರೆಂದರೆ ಹನುಮಂತಯ್ಯ, ಬೊಮ್ಮಯ್ಯ , ಹುಚ್ಚಮ್ಮ ಮತ್ತು ಲಕ್ಷ್ಮಮ್ಮ ಇರುತ್ತಾರೆ.

ಬಾಕಿ ಉಳಿದ 1 ಎಕರೆ 26 ಗುಂಟೆ ಜಮೀನನ್ನು ನನ್ನ ತಂದೆ ಹನುಮಂತಯ್ಯ ಮತ್ತು ಬೊಮ್ಮಯ್ಯ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ನಾವು ಸ್ವಾಧೀನದಲ್ಲಿದ್ದ ಸ್ವತ್ತನ್ನು ಸೇರಿಸಿ ಭಾಗ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. 1964 ರಲ್ಲಿ ನಮ್ಮ ಅಜ್ಜಿ ಖಾತೆ ಮಾಡಿಸಿಕೊಂಡಿದ್ದಾರೆ. ಯಾವ ರೀತಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈಗಲೂ ಸಹ ಅದು ಗ್ರಾಮ ಠಾಣಾದಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸರ್ಕಾರದ ಸ್ವತ್ತು ಎಂದು ತಿಳಿದುಕೊಂಡು ಪ್ರತಿವಾದಿ 1 ರಿಂದ 4 ರವರನ್ನು ಪಾರ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಇತ್ತೀಚೆಗೆ ತಹಶೀಲ್ದಾರ್ ರವರು ಗ್ರಾಮ ಠಾಣಾ ಎಂದು ಅದನ್ನು ಘೋಷಿಸಿದ್ದರಿಂದ ಪಾರ್ಟಿ ಮಾಡಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ಇದೇ ಸ.ನಂಬರ್ ನಲ್ಲಿ ನಮ್ಮ ಚಿಕ್ಕಮ್ಮ ದಾವೆ ಹಾಕಿದ್ದಾರೆ ಎಂದರೆ ಸರಿ. ಅವರು ಸಹ ಸರ್ಕಾರದ ವಿರುದ್ಧ ದಾವೆ ಮಾಡಿದ್ದಾರೆ ಎಂದರೆ ಸರಿ.

ನಾನು 1 ಎಕರೆ 7 ಗುಂಟೆಗಾಗಿ ದಾವೆ ಮಾಡಿದ್ದೇನೆಂದರೆ ಸರಿ. ನಮ್ಮ ಚಿಕ್ಕಮ್ಮ 14 ಗುಂಟೆ ಸ್ವತ್ತಿಗಾಗಿ ದಾವೆ ಮಾಡಿದ್ದಾರೆ. ಗುಂಡೂರಾವ್ ಇವರು ಮಾಡಿಕೊಂಡ ವಿಭಾಗಪತ್ರದಲ್ಲಿ ಸರ್ಕಾರ ಸ್ವಾಧೀನಪಡಿಸಿಕೊಂಡ ಜಮೀನು ಎಂದು ಬರೆದಿರುವ ವಿಷಯ ಮತ್ತು ನಮ್ಮ ಅಜ್ಜಿ ದಾಸಪ್ಪ ಇವರಿಗೆ ಬರೆದುಕೊಟ್ಟ ಕ್ರಯಪತ್ರದಲ್ಲಿ ಉತ್ತರದ ಕಡೆಗೆ ಗ್ರಾಮ ಠಾಣಾ ಎಂದು ಬರೆದಿರುವ ವಿಷಯ ನನಗೆ ಗೊತ್ತಿದ್ದರೂ ಸಹ ದಾವಾ ಸ್ವತ್ತು ನಮಗೆ ಸೇರಬೇಕೆಂದು ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಉಳಿದ 1 ಎಕರೆ 26 ಗುಂಟೆ ಸ್ವತ್ತಿನ ಪೈಕಿ ನಾವು ಸಾಕಷ್ಟು ಜನರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದೇವೆ ಎಂದರೆ ಸರಿ. ಅದರ ಪೈಕಿ 6 ಗುಂಟೆಯನ್ನು ದಿನಾಂಕ : 30.01.2013 ರಂದು ಹನುಮಕ್ಕನಿಗೆ ಒಂದು ಕಾಲು ಗುಂಟೆಯನ್ನು , ಅದೇ ದಿನ ನಟರಾಜು ಬಿನ್ ಮುನಿವೆಂಕಟಪ್ಪ ಇವರಿಗೆ 2 ಗುಂಟೆಯನ್ನು , ನಾಗರಾಜು ಮತ್ತು ಅದೇ ದಿನ ಶಂಕರ್ ಇವರಿಗೆ ಎರಡು ಕಾಲು ಗುಂಟೆ,

ದಿನಾಂಕ : 10.1.2013 ರಲ್ಲಿ ನಟರಾಜು ಇವರಿಗೆ 2 ಗುಂಟೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ.

ಬೊಮ್ಮಯ್ಯ ನಮ್ಮ ಚಿಕ್ಕಪ್ಪ ಇರುತ್ತಾರೆ. ಬೊಮ್ಮಯ್ಯ ನ ಹೆಂಡತಿ ಮತ್ತು ಮಕ್ಕಳು ದಿನಾಂಕ : 18.03.2016 ರಂದು 16 ಗುಂಟೆಯನ್ನು ವಿಜಯ್ ಕುಮಾರ್ ಮತ್ತು ನನಗೆ ಮಾರಾಟ ಮಾಡಿದ್ದಾರೆ. ಗೋವಿಂದರಾಜು ಇವರಿಗೆ ಒಂದು ಕಾಲು ಗುಂಟೆಯನ್ನು ದಿನಾಂಕ 1.08.2016 ರಂದು ಬೊಮ್ಮಯ್ಯ ನ ಹೆಂಡತಿ ಲಕ್ಷ್ಮಮ್ಮ ಇವರು ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಮ್ಮ ತಂದೆ ಮತ್ತು ಚಿಕ್ಕಪ್ಪ ಇವರ ಮದ್ಯೆ ಆದ ಭಾಗದಲ್ಲಿ ಸ.ನಂ. 165/1 ರಲ್ಲಿ ನಮ್ಮ ತಂದೆಗೆ 31 ಗುಂಟೆ ಸ್ವತ್ತು

ಬಂದಿತ್ತು. ಅದರಲ್ಲಿ 6 ಗುಂಟೆಯನ್ನು ನಾವು ಮಾರಾಟ ಮಾಡಿದ್ದೇವೆ. ಉಳಿಕೆ ಸ್ವತ್ತು ನಮ್ಮದು ಇರುತ್ತದೆ. ನಾನು ದಾವೆಯನ್ನು ಸರ್ಕಾರಿ ಸ್ವತ್ತಿನ ಚೆಕ್ ಬಂದಿ ಮತ್ತು ವಿಸ್ತೀರ್ಣ ಸೇರಿಸಿ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೊದಲು ಪೋಡಿ ಆಗಿರಲಿಲ್ಲ ಎಂದರೆ ಸರಿ. ಅದರ ಸ.ನಂ. 165 ಇತ್ತು ಎಂದರೆ ಸರಿ. ಗುಂಡೂರಾವ್ ಇವರಿಗೆ ಬಂದ ಸ್ವತ್ತಿನಲ್ಲಿ 15 ಗುಂಟೆ ಖರಾಬು ಇತ್ತು. ಸದರಿ ಖರಾಬು ರಸ್ತೆಗೆ ಹೋಗಿತ್ತು.

ಓ ಎಸ್ 66/1992 ಇದು ನಮ್ಮ ಅಜ್ಜಿ ವೆಂಕಟಮ್ಮ ಹಾಕಿರುವ ಕೇಸ್ ಇರುತ್ತದೆ. ಅದರ ತೀರ್ಪು ಮತ್ತು ಡಿಕ್ರಿಗಳನ್ನು ನಾನು ಓದಿದ್ದೇನೆ. ಆ ದಾವೆಯನ್ನು ನಮ್ಮ ಅಜ್ಜಿ ನಮ್ಮ ಸಂಬಂಧಿಕರ ವಿರುದ್ದ ಹಾಕಿದ್ದರು. ಆ ದಾವೆಯನ್ನು 1 ಎಕರೆ 21 ಗುಂಟೆಗಾಗಿ ಹಾಕಿದ್ದರು. 1992 ಕ್ಕಿಂತ ಮೊದಲು ದಾಸಪ್ಪ ಇವರಿಗೆ ಅರ್ಧ ಭಾಗದ ಸ್ವತ್ತನ್ನು ಮಾರಿದ್ದರು ಎಂದರೆ ಸರಿ. ಓ ಎಸ್ 66/1992 ರಲ್ಲಿ ನಮ್ಮ ಅಜ್ಜಿ ಗುಂಡೂರಾವ್ ಇವರಿಗೆ ಸೇರಿದ ಬಾಕಿ ಉಳಿದ 2 ಎಕರೆಯಲ್ಲಿಯೂ ನಾವು ಸ್ವಾಧೀನದಲ್ಲಿದ್ದೇವೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಆ ಡಿಕ್ರಿಯನ್ನು ಓದಿ ತಿಳಿದುಕೊಂಡು ಸಾಕ್ಷಿ ಹೇಳುತ್ತಿದ್ದೇನೆ. ಅದರಲ್ಲಿ ಪಶ್ಚಿಮಕ್ಕೆ ಅದೇ ಸ,ನಂ. ನಲ್ಲಿ ಇರುವ ಉಳಿಕೆ ಹೊಲ ಎಂದು ಬರೆದಿದೆ ಎಂದರೆ ಸರಿ. ಆ 2 ಎಕರೆ ಸ್ವತ್ತಿನಲ್ಲಿ ನಮ್ಮ ಅಜ್ಜಿ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಅದರಲ್ಲಿ ಡಿಕ್ರಿಯಾಗಿದ್ದು ದಿನಾಂಕಃ 16.12.21997 ರಲ್ಲಿ ಎಂದರೆ ಸರಿ. ಇದೇ ಮೊದಲ ಬಾರಿಗೆ ನಾವು ಸರ್ಕಾರದ ವಿರುದ್ದ ದಾವೆ ಮಾಡಿದ್ದೇವೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಾವು ಪ್ರತಿಕೂಲ ಸ್ವಾಧೀನದಲ್ಲಿದ್ದೇವೆ ಎಂದು ದಾವೆ ಹಾಕಿದ್ದೇವೆ ಎಂದರೆ ಸರಿ.

ಗುಂಡೂರಾವ್ ಇವರು ಗ್ರಾಮ ಠಾಣಾಕ್ಕೆ ಕೊಟ್ಟ ಸ್ವತ್ತು ಈಗ ಖಾಲಿ ಇದೆ ಎಂದರೆ ಸರಿಯಲ್ಲ. ಅದರಲ್ಲಿ ನಾವು ವ್ಯವಸಾಯ ಮಾಡುತ್ತಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ಅವರಿಗೆ ಸೇರಿದ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿದ್ದೇವೆ ಎಂದು ಈ ದಾವೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆ ಜಾಗದಲ್ಲಿ ಚಿಕ್ಕಣ್ಣ ಇವರ ಹೆಂಡತಿ ಗಂಗಮ್ಮ ಎಂಬುವವರು ಮನೆ ಕಟ್ಟಿ ಕೊಂಡಿದ್ದಾರೆ ಎಂದರೆ ಸರಿ. ಅದನ್ನು ನಮ್ಮ ಅಜ್ಜಿ ಬರೆದುಕೊಟ್ಟಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಆ ದಾಖಲೆಯನ್ನು ನಾನು ಕೊಟ್ಟಿಲ್ಲ. ದೊಡ್ಡಯ್ಯನ ಹೆಂಡತಿ ವೆಂಕಟಮ್ಮ ಆ 2 ಎಕರೆಯಲ್ಲಿ 30X40 ರಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ರಾಮಯ್ಯ ಇವರು ಅಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ಅದನ್ನು ನಮ್ಮ ಅಜ್ಜಿ ಕಟ್ಟಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಈ ವಿಷಯವನ್ನು ನಾವು

ದಾವೆಯಲ್ಲಿ ಹೇಳಿಲ್ಲ ಎಂದರೆ ಸರಿ. ತಿಮ್ಮಯ್ಯ ಮತ್ತು ರಂಗಸ್ವಾಮಿ ಇವರು 30X40 ಸೈಟ್ ನಲ್ಲಿ ತಲಾ ಅರ್ಧ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ಮೇಲೆ ಹೇಳಿದರು ಆ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು 30 ವರ್ಷಗಳ ಮೇಲೆ ಆಗಿದೆ. ಸೋಲೂರಿನಿಂದ ಬಂದ ಹುಚ್ಚಪ್ಪ ಮತ್ತು ಅಮೀನ್ ಸಾಬ್ ನ ಮಗಳು ರಶೀದಾ ಇವರು ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ಅವರಿಗೆ ನಮ್ಮ ತಂದೆ ಬರೆದುಕೊಟ್ಟಿದ್ದಾರೆ. ಆ ಬಗ್ಗೆ ದಾಖಲೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಎಲ್ಲ ಮನೆಗಳು 2 ಎಕರೆ ವಿಸ್ತೀರ್ಣದಲ್ಲಿ ಬರುತ್ತವೆ ಎಂದರೆ ಸರಿ. ಅವರನ್ನು ನಾವು ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ. ದಾವಾ ಸ್ವತ್ತು ಸರ್ಕಾರದ ಸ್ವತ್ತು ಎಂದು ಗೊತ್ತಿದ್ದರೂ ಸಹ ಕಾನೂನು ಪ್ರಕಾರ ನೋಟೀಸ್ ಕೊಟ್ಟು ದಾವೆ ಮಾಡಿಲ್ಲ ಎಂದರೆ ಸರಿಯಲ್ಲ.

ತಹಶೀಲ್ದಾರ್ ಇವರು 2016 ರಲ್ಲಿ ಸ್ಥಳ ಪರಿಶೀಲನೆ ಮಾಡಲು ಬಂದಿದ್ದರು. ಆಗ ಆ ಸ.ನಂಬರ್ ನ್ನು ಅಳತೆ ಮಾಡಿಸಿಲ್ಲ. ಅದರಲ್ಲಿ ಆ ಸಂದರ್ಭದಲ್ಲಿ ಸುಮಾರು 5/6 ಮನೆಗಳನ್ನು ಕಟ್ಟಿದ್ದವು. ಅದರಲ್ಲಿ ನಮ್ಮ ಮನೆಯು ಇತ್ತು. ಈಗ ಅಲ್ಲಿ 7 ಮನೆಗಳಿವೆ. ಅದರಲ್ಲಿ ನಮಗೆ ಸಂಬಂಧಿಸಿದ 3 ಮನೆಗಳಿವೆ. ಸ.ನಂ. 165 ರಲ್ಲಿ 11 ಪೋಡುಗಳಾಗಿವೆ. ಸ.ನಂ. 165/1 ನಮ್ಮ ತಂದೆಗೆ ಭಾಗವಾಗಿ ಬಂದ ಜಮೀನಿರುತ್ತದೆ. ಸ.ನಂ. 165/2 ಇದು ಕ್ರಯಕ್ಕೆ ತೆಗೆದುಕೊಂಡ ಸ್ವತ್ತಿನಲ್ಲಿ ಉಳಿದ ಸ್ವತ್ತು ಇರುತ್ತದೆ. ಸ.ನಂ.165/9 ನಮ್ಮ

ಚಿಕ್ಕಪ್ಪನಿಗೆ ಬಂದ ಸ್ವತ್ತು ಇರುತ್ತದೆ. ಸ.ನಂ. 165/11 ರಲ್ಲಿ 16 ಗುಂಟೆಯನ್ನು ನಾನು ಮತ್ತು ನನ್ನ ತಮ್ಮ ವಿಜಯ್ ಕುಮಾರ್ ಕ್ರಯಕ್ಕೆ ತೆಗೆದುಕೊಂಡ ಸ್ವತ್ತು ಇರುತ್ತದೆ. ನಾವು ಕಾನೂನು ಬಾಹಿರವಾಗಿ ಸರ್ಕಾರಕ್ಕೆ ಸೇರಿದ ಜಮೀನನ್ನು ಸೇರಿಸಿ ಪೋಡು ಮಾಡಿಕೊಂಡಿದ್ದೇವೆ ಎಂದು ತಹಶೀಲ್ದಾರ್ ಇವರು ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. ಆರ್ ಆರ್ ಟಿ 89/2016-17 ರಲ್ಲಿ ತಹಶೀಲ್ದಾರ್ ಆ ರೀತಿ ಆದೇಶ ಮಾಡಿದ್ದಾರೆ ಎಂದರೆ ಸರಿ. ತಹಶೀಲ್ದಾರ್ ಇವರು ಅದನ್ನು ಸ್ವಯಂಪ್ರೇರಿತವಾಗಿ ದಾಖಲಿಸಿದ್ದರು ಎಂದರೆ ಸರಿಯಲ್ಲ. ಊರಿನವರು ಅರ್ಜಿ ಕೊಟ್ಟಿದ್ದರು ಎಂದು ಸಾಕ್ಷಿ ಹೇಲಳುತ್ತಾರೆ.

ನಾವು ಆ ಆದೇಶದ ವಿರುದ್ದ ಅಪೀಲು ಮಾಡಿದ್ದೇವೆ ಎಂದರೆ ಸರಿ. ಅದೇ ರೀತಿ ನ್ಯಾಯಾಲಯದಲ್ಲಿ ದಾವೆ ಮಾಡಿದ್ದೇವೆ ಎಂದರೆ ಸರಿ. ನಾವು ದಾವೆ ಸಲ್ಲಿಸಲು ತಹಶೀಲ್ದಾರ್ ರವರ ಆದೇಶವೇ ಕಾರಣ ಎಂದರೆ

ಸರಿ. ಬೇರೆ ಯಾವುದೆ ಕಾರಣ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಈ ದಾವೆ ಹಾಕುವ ಮೊದಲುಮೂಲ ದಾಖಲೆಯನ್ನು ನಾವು ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. 1 ಎಕರೆ 26 ಗುಂಟೆ ಸ್ವತ್ತನ್ನು ಹೊರತುಪಡಿಸಿ ಸ.ನಂ. 165 ರಲ್ಲಿ ನಮಗೆ ಬೇರೆ ಯಾವುದೆ ಭಾಗದಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸ.ನಂ. 165/1 ಮತ್ತು ಸ.ನಂ.165/11 ಇವುಗಳು ಸರ್ಕಾರಕ್ಕೆ ಸೇರಿದ ಸ್ವತ್ತುಗಳೆಂದರೆ ಸರಿಯಲ್ಲ. ಸುಳ್ಳು ಚೆಕ್ ಬಂದಿ ಮತ್ತು ಸುಳ್ಳು ಪೋಡುಗಳ ಆಧಾರದ ಮೇಲೆ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಗುಂಡೂರಾವ್ ಕ್ರಯಕ್ಕೆ ಕೊಟ್ಟ 3 ಎಕರೆ 12 ಗುಂಟೆ ಹೊರತುಪಡಿಸಿ ಉಳಿದ 2 ಎಕರೆಯಲ್ಲಿ ನಮಗೆ ಮತ್ತು ನಮ್ಮ ಕುಟುಂಬದವರಿಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಅದು ಗ್ರಾಮದ ಸ್ವತ್ತು ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**